ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**572**
ಸದಸ್ಯರ ಹೆಸರು	ಡಾ: ತೇಜಸ್ವಿನಿ ಗೌಡ
ಉತ್ತರಿಸುವ ದಿನಾಂಕ	17-12-2021
ಉತ್ತರಿಸುವವರು	ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

	ಪ್ರಶ್ನೆಗಳು	ಉತ್ತರಗಳು
ಅ)	ಕರ್ನಾಟಕದಲ್ಲಿನ ರೇಷ್ಮೆ ಉತ್ಪತ್ತಿ ಎಷ್ಟು; ರೈತರು ಬೆಳವ ಗೂಡಿನ ಪ್ರಮಾಣ, ನೂಲಿನ ಪ್ರಮಾಣ ಹಾಗೂ ನೇಕಾರರು ಮತ್ತು ಯಂತ್ರಗಳು, ರೇಷ್ಮೆ ವಸ್ತ್ರ, ಸೀರೆಗಳ ಪ್ರಮಾಣ ಎಷ್ಟು; (ಅಂಕಿ-ಅಂಶ ಸಮೇತ ವಿವರ ನೀಡುವುದು)	2020-21ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾದ ರೇಷ್ಮೆ ಗೂಡಿನ ಪ್ರಮಾಣ 80396 ಮೆ.ಟನ್ ಹಾಗೂ 11292 ಮೆ.ಟನ್ ಕಚ್ಚಾ ರೇಷ್ಮೆ ಉತ್ಪಾದನೆಯಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆ ಕಸುಬಿನಲ್ಲಿ 7059 ಕುಟುಂಬಗಳು ತೊಡಗಿಸಿಕೊಂಡಿರುತ್ತವೆ. ಕೈಮಗ್ಗ ಮತ್ತು ಜವಳಿ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ 42,000 ಕೈಮಗ್ಗಗಳು ಹಾಗೂ 1,20,000 ವಿದ್ಯುತ್‌ಮಗ್ಗಗಳು ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ (ಕೆ.ಎಸ್.ಐ.ಸಿ.) ಇವರಿಂದ ವಾರ್ಷಿಕ 90,000 ರಿಂದ 1,00,000 ಗಳಷ್ಟು ಸೀರೆಗಳ ಉತ್ಪಾದನೆಯಾಗುತ್ತದೆ.
ಆ)	ರೇಷ್ಮೆ ಬೆಳೆಗಾರರನ್ನು ಕಾಡುತ್ತಿರುವ ರೋಗಗಳಾವುವು; ಇಲಾಖೆ ಒದಗಿಸುತ್ತಿರುವ ಪರಿಹಾರವೇನು; ಬೆಳೆಗಾರರಿಗೆ ಸಿಗುತ್ತಿರುವ ಯೋಜನೆಗಳೇನು; ಮಹಿಳಾ ಬೆಳೆಗಾರರಿಗಿರುವ ವಿಶೇಷ ಸೌಲಭ್ಯಗಳಾವುವು;	ರೇಷ್ಮೆ ಬೆಳೆಯಲ್ಲಿ ಹಿಪ್ಪುನೇರಳೆ ತೋಟಗಳಿಗೆ ತಗಲುವ ಬೂದಿ ರೋಗ, ಎಲೆ ಚುಕ್ಕೆ, ತುಕ್ಕು, ಬೇರು ಗಂಟು ಮತ್ತು ಬೇರು ಕೊಳೆ ರೋಗಗಳು ಪ್ರಮುಖವಾಗಿವೆ. ರೇಷ್ಮೆ ಹುಳುಗಳಿಗೆ ಸಾಮಾನ್ಯವಾಗಿ ಸುಣ್ಣಕಟ್ಟು, ಸಪ್ಪೆ, ಹಾಲುತೊಂಡೆ ರೋಗಗಳು ಕಂಡುಬರುತ್ತವೆ. ರೇಷ್ಮೆ ಇಲಾಖೆಯಿಂದ ಹಿಪ್ಪುನೇರಳೆ ತೋಟದ ರೋಗಗಳ ನಿಯಂತ್ರಣಕ್ಕೆ ಸಂಶೋಧನಾ ಸಂಸ್ಥೆಯಿಂದ ಶಿಫಾರಸ್ಸು ಮಾಡುವ ಭೌತಿಕ, ರಾಸಾಯನಿಕ ಮತ್ತು ಜೈವಿಕ ಕ್ರಮಗಳನ್ನು ಕ್ಷೇತ್ರಮಟ್ಟದಲ್ಲಿ ಗುಂಪು ಚರ್ಚೆ, ಕ್ಷೇತ್ರೋತ್ಸವ, ರೈತರಿಂದ ರೈತರಿಗೆ ತರಬೇತಿ ಹಾಗೂ ರೈತರ ತೋಟಗಳಲ್ಲಿ ಪ್ರಾತ್ಯಕ್ಷತಾ ಕಾರ್ಯಕ್ರಮಗಳ ಹಾಗೂ ಕರ ಪತ್ರಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ಇದರೊಂದಿಗೆ ಇಲಾಖೆಯ ವತಿಯಿಂದ ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕೆ ಸೋಂಕು ನಿವಾರಕಗಳು, ಹಾಸಿಗೆ ಸೋಂಕು ನಿವಾರಕಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

		ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕಾರ್ಯಕ್ರಮಗಳಡಿ ಫಲಾನುಭವಿ ಆಧಾರಿತ ಮಹಿಳೆಯರಿಗೆ ಶೇ.33ರಷ್ಟು ಮೀಸಲು ನಿಗದಿಪಡಿಸಿ, ಅವರುಗಳಿಗೆ ಆದ್ಯತೆ ಮೇರೆಗೆ ಅನುದಾನದ ಲಭ್ಯತೆಯಂತೆ ಸಹಾಯಧನ ಮತ್ತು ಪ್ರೋತ್ಸಾಹಧನದ ಸವಲತ್ತನ್ನು ನೀಡಲಾಗುತ್ತಿದೆ. ರೇಷ್ಮೆ ಗೂಡಿನಿಂದ ತಯಾರಿಸುವ ಕರಕುಶಲ ವಸ್ತುಗಳಿಗೆ ಇಲಾಖೆಯ ರೇಷ್ಮೆ ತರಬೇತಿ ಸಂಸ್ಥೆಗಳಲ್ಲಿ ಉಚಿತ ಊಟ ಮತ್ತು ವಸತಿಯೊಂದಿಗೆ ಒಂದು ತಿಂಗಳ ಕರಕುಶಲ ತರಬೇತಿ ನೀಡಲಾಗುತ್ತಿದೆ. ಇದಕ್ಕೆ ಅಗತ್ಯವಿರುವ ಚಿಟ್ಟೆ ಕೊರೆದ ಗೂಡುಗಳನ್ನು ಖರೀದಿಸಲು ಶೇ.90 ರ ಸಹಾಯಧನವನ್ನು ನೀಡಲಾಗುತ್ತಿದೆ.
ಇ)	ರೇಷ್ಮೆ ಇಲಾಖೆಯು ನೇಯ್ಗೆ ವಲಯದಲ್ಲಿ ಅಳವಡಿಸಿರುವ ಆಧುನಿಕ ವಿಧಾನಗಳು ಹಾಗೂ ಯಂತ್ರಗಳಾವುವು: (ವಿವರ ನೀಡುವುದು)	ಕೆ.ಎಸ್.ಐ.ಸಿ., ನಿಗಮದ ಘಟಕಗಳಲ್ಲಿ ರೇಷ್ಮೆ ಸೀರೆಯನ್ನು ಉತ್ಪಾದಿಸಲು ಮೂಲಭೂತವಾಗಿ ಸ್ವಯಂಚಾಲಿತ ರೇಷ್ಮೆ ಬಿಚ್ಚಾಣಿಕೆ ಘಟಕವನ್ನು ಹೊಂದಿದ್ದು, ಇದರೊಂದಿಗೆ ಈ ಕೆಳಕಂಡ ಆಧುನಿಕ ತಂತ್ರಜ್ಞಾನಗಳುಳ್ಳ ಯಂತ್ರಗಳನ್ನು ಉಪಯೋಗಿಸಿ ಕೊಳ್ಳಲಾಗುತ್ತಿದೆ. 1. ವೈಂಡಿಂಗ್ ಯಂತ್ರಗಳು – 26 2. ಡಬ್ಲಿಂಗ್ ಯಂತ್ರಗಳು – 10 3. ಟ್ವಿಸ್ಟಿಂಗ್ ಯಂತ್ರಗಳು – 22 4. ಕೋನ್ ವೈಂಡಿಂಗ್ – 26 5. ಪರ್ನ್ ವೈಂಡಿಂಗ್ ಯಂತ್ರಗಳು – 23 6. ಲೂಮ್ಸ್ ಯಂತ್ರಗಳು – 249 7. ವಾರ್ಪಿಂಗ್ ಯಂತ್ರಗಳು - 05 8. ಗೋಲ್ಡ್ ಲೇಸ್ ವಾರ್ಪಿಂಗ್ ಯಂತ್ರಗಳು – 02 9. ಸೋಕಿಂಗ್ ಯಂತ್ರಗಳು – 02 10.ವಾಕ್ಯೂಮ್ ಹೀಟ್ ಸೆಟ್ಟಿಂಗ್ ಯಂತ್ರಗಳು – 03 11.ಕಾಂಟ್ರಾಸ್ಟ್ ಡೈಯಿಂಗ್ ಯಂತ್ರಗಳು – 02 ಕೆ.ಎಸ್.ಐ.ಸಿ.ಯು ಕಚ್ಚಾ ರೇಷ್ಮೆಯನ್ನು ಉತ್ಪಾದಿಸಲು ಕೆಳಕಂಡ ಆಧುನಿಕ ಯಂತ್ರಗಳನ್ನು ಉಪಯೋಗಿಸಿ ಕೊಳ್ಳಲಾಗುತ್ತಿದೆ. 1. ಕಕೂನ್ ಡ್ರೈ ಯಂತ್ರಗಳು – 03 2. ಪೀಲಿಂಗ್ ಯಂತ್ರಗಳು – 02 3. ಸಾರ್ಟಿಂಗ್ ಯಂತ್ರ – 01 4. ಬಾಯ್ಲಿಂಗ್ ಯಂತ್ರಗಳು – 04 5. ರೀಲಿಂಗ್ ಯಂತ್ರಗಳು – 08 6. ರೀ-ರೀಲಿಂಗ್ ಯಂತ್ರಗಳು – 05 7. ರೀ-ರೀಲಿಂಗ್ ಬಾಯ್ಲಿಂಗ್ – 02 8. ಸಿಲ್ಕ್ ಟೆಸ್ಟಿಂಗ್ ಯಂತ್ರಗಳು – 02 9. ಸಿಲ್ಕ್ ಸೀಯಿಂಗ್ & ಸಿಲ್ಕ್ ಬಾಯ್ಲಿಂಗ್ – 03

ಈ)	ಕರ್ನಾಟಕದ ಕೊಡುಗೆ ಸ್ಥಾನಮಾನ ದೇಶೀಯ ಮಟ್ಟದಲ್ಲಿ ಎಷ್ಟಿದೆ: ಅಗತ್ಯವಿರುವ ಇತರೆ ಅವಶ್ಯಕತೆಗಳೇನು:	ಕರ್ನಾಟಕವು ದೇಶೀಯ ಮಟ್ಟದಲ್ಲಿ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಶೇ.49ರಷ್ಟು ಇರುತ್ತದೆ. ಅಂತರಾಷ್ಟ್ರೀಯ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆಯ ಅವಶ್ಯಕತೆ ಇದ್ದು, ರಾಜ್ಯ ರೇಷ್ಮೆ ಇಲಾಖೆಯು ಸ್ವಯಂಚಾಲಿತ ರೇಷ್ಮೆ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುತ್ತಿದ್ದು, ಇದುವರೆಗೆ 58 ಘಟಕಗಳನ್ನು ಸಹಾಯಧನದ ಮೂಲಕ ಸ್ಥಾಪಿಸಿ, ಕ್ಷೇತ್ರಮಟ್ಟದ ನೂಲು ಬಿಚ್ಚಾಣಿಕೆದಾರರನ್ನು ಪ್ರೋತ್ಸಾಹಿಸಿದೆ. ಮುಂಬರುವ ದಿನಗಳಲ್ಲಿ ಅಂತರಾಷ್ಟ್ರೀಯ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದಿಸುವ ಗುರಿ ಹೊಂದಿದ್ದು, ಇದಕ್ಕೆ ಪೂರಕವಾಗಿ ದ್ವಿತಳಿ ಸಂಕರಣ ಗೂಡು ಉತ್ಪಾದನೆಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ.
ಉ)	ಕರ್ನಾಟಕದ ರೇಷ್ಮೆ ವಸ್ತ್ರ-ಸೀರೆ ಉತ್ಪನ್ನಗಳ ಪ್ರಮುಖ ಮಾರುಕಟ್ಟೆ ಯಾವುದು: ಜಗತ್ತಿನ ಅತ್ಯುತ್ತಮ ತಂತ್ರಜ್ಞಾನ ಹೊಂದಿರುವ ದೇಶಗಳು ಯಾವುವು: ರಾಜ್ಯಕ್ಕೆ ಅವುಗಳ ಲಭ್ಯತೆ ಇದೆಯೇ:	ಪ್ರಸ್ತುತ ಕೆ.ಎಸ್.ಐ.ಸಿ., ನಿಗಮವು ಉತ್ಪಾದಿಸುವ ರೇಷ್ಮೆ ಸೀರೆಗಳನ್ನು ತನ್ನದೇ ಮಾರಾಟ ಮಳಿಗೆಗಳಾದ ಮೈಸೂರು, ಬೆಂಗಳೂರು, ಚನ್ನಪಟ್ಟಣ, ದಾವಣಗೆರೆ, ಹೈದ್ರಾಬಾದ್ ಮತ್ತು ಚನ್ನೈ ಮಾರಾಟ ಮಳಿಗೆಗಳ ಮುಖಾಂತರ ಮಾರಾಟ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುವ ಕಚ್ಚಾ ರೇಷ್ಮೆಯನ್ನು ಮೊಳಕಾಲ್ಮೂರು, ಇಳಕಲ್, ಆಂಧ್ರಪ್ರದೇಶದ ಧರ್ಮಾವರಂ, ಹಿಂದೂಪುರಂ, ಪೋಚಂಪಲ್ಲಿ, ಸೀರೆಗಳು ಹಾಗೂ ತಮಿಳುನಾಡಿನ ಕಾಂಜೀವರಂ ಸೀರೆಗಳ ಉತ್ಪಾದನೆಗಾಗಿ ಉಪಯೋಗವಾಗುತ್ತಿದೆ. ಜಗತ್ತಿನ ಅತ್ಯುತ್ತಮ ತಂತ್ರಜ್ಞಾನ ಹೊಂದಿರುವ ರೇಷ್ಮೆ ಉತ್ಪಾದಿಸುತ್ತಿರುವ ದೇಶಗಳಲ್ಲಿ ಪ್ರಮುಖವಾಗಿ ಚೈನಾ, ಜಪಾನ್, ಫ್ರಾನ್ಸ್, ಮಿಯೆಟ್ನಾಂ, ಕೊರಿಯಾ, ಟರ್ಕಿ ಮತ್ತು ಥೈಲ್ಯಾಂಡ್ ಎಂದು ತಿಳಿದು ಬಂದಿರುತ್ತದೆ. ಪ್ರಪಂಚದೆಲ್ಲೆಡೆ ಮುಕ್ತ ಮಾರುಕಟ್ಟೆ ಇರುವುದರಿಂದ ಅವುಗಳ ಲಭ್ಯತೆಗೆ ಅವಕಾಶವಿರುತ್ತದೆ.
ಊ)	ಈಗಿರುವ ಆಯವ್ಯಯ, ಇಲಾಖೆಗೆ ಸಾಕಾಗುತ್ತಿದೆಯೇ: ಕೊರತೆ ಇದೆಯೇ: ಯಾವ ವಲಯಕ್ಕೆ ಹೆಚ್ಚು ಅನುದಾನ ಬೇಕಿದೆ: ಬೇಡಿಕೆ ಇಡಲಾಗಿದೆಯೇ?	ಈಗಿರುವ ಆಯವ್ಯಯ ಇಲಾಖೆಗೆ ಸಾಕಾಗುತ್ತಿಲ್ಲ. ಕೊರತೆಯಿರುತ್ತದೆ. ಮುಂದುವರೆದು, ರಾಜ್ಯದಲ್ಲಿ ಗೂಡಿನ ಪೂರ್ವ ಹಾಗೂ ನಂತರದ ವಲಯದ ಚಟುವಟಿಕೆಗಳಲ್ಲಿ ಹೆಚ್ಚಾಗಿ ರೇಷ್ಮೆ ಭಾಗೀದಾರರಿದ್ದು, ಪ್ರೋತ್ಸಾಹಿಸಲು ಅನುದಾನದ ಅವಶ್ಯಕತೆಯಿರುತ್ತದೆ. ಇದಕ್ಕಾಗಿ ಇಲಾಖೆಗೆ ರೂ.50 ರಿಂದ 60 ಕೋಟಿಗಳ ಹೆಚ್ಚುವರಿ ಅನುದಾನದ ಅವಶ್ಯಕತೆಯಿದೆ.

ಸಂಖ್ಯೆ:ರೇಷ್ಮೆ 225 ರೇಕೃವಿ 2021

(ಡಾ. ನಾರಾಯಣಗೌಡ)
ರೇಷ್ಮೆ, ಯುವಸಬಲೀಕರಣ ಮತ್ತು
ಕ್ರೀಡಾ ಸಚಿವರು